ತೆರೆದ ಎವೆ ಮುಚ್ಚಲೂ ಮರೆಯುವಂಥ ಐಭೋಗದ ಅರಮನೆ. ಕಂಭ, ಗೋಡೆ, ನೆಲ ಎಲ್ಲಿ ನೋಡಿದರಲ್ಲಿ ಕಣ್ಣು ಕೋರೈಸುವ ಹೊಳಪು ಕತ್ತೆತ್ತಿ ನೋಡಿದಷ್ಟೂ ಆಕಾಶದೆತ್ತರ ಕಾಣುವ ಹೆಬ್ಬಾಗಿಲು, ಅದರ ಇಕ್ಕೆಲಗಳಲ್ಲಿ ನೋಟಮಾತ್ರದಿಂದಲೇ ಎದೆಯಲ್ಲಿ ನಡುಕ ಹುಟ್ಟಿಸುವ ಕಟ್ಟುಮಸ್ತಾದ ಕಾವಲುಗಾರರು. ಒಳಗೆ ಸಾಲಾಗಿ ಹಾಕಿದ ರತ್ನಖಚಿತ ಆಸನಗಳಲ್ಲಿ ಆಸೀನರಾದ ವಂದಿಮಾಗಧರು. ಪಕ್ಕದಲ್ಲಿ ಇನ್ನೇನು ಸಣ್ಣ ಸೂಚನೆ ಸಿಕ್ಕರೆ ಸಾಕು, ಮೈಚಳಿ ಬಿಟ್ಟು ನರ್ತಿಸಿ, ನೋಡುವವರ ಎದೆಯಲ್ಲಿ ಡಮರುಗ ಹೊಡೆದುಕೊಳ್ಳುವ ಹಾಗೆ ಮಾಡಬಲ್ಲ ಲಲಿತಾಂಗಿಯರು...

ಆಹಾ! ಇದೇನು ಆಧುನಿಕ ಭಾರತದ ಕಾಲಚಕ್ರದ ಮುಳ್ಳು ಸರ್ರನೆ ಹಿಂಜಾರಿ ರಾಜಪ್ರಭುತ್ವಕ್ಕೆ ಇಳಿಯಿತೋ ಎಂಬ ವಿಸ್ಮಯದಲ್ಲಿಯೇ ಅಡಿಯಿಟ್ಟರೆ ಆಸನಗಳ ಸಾಲಿನ ತುದಿಯಲ್ಲಿ ಅಗೋ ಕಾಣುತ್ತಿದೆ ಅಷ್ಟೆತ್ತರ, ಅಷ್ಟಗಲದ ಮಹಾ ಸಿಂಹಾಸನ. ಅದರ ಎರಡೂ ಕೈಗಳಲ್ಲಿನ ಸಿಂಹಗಳು ಇನ್ನೇನು ಜಿಗಿದು ಎದುರಿಗೆ ಬಂದು ನಿಲ್ಲುತ್ತವೆಯೇನೋ ಎಂಬ ಭಯದಲ್ಲಿ ಹೆಜ್ಜೆ ಮುಂದಡಿಯಿಡಲು ಹಿಂಜರಿಯುವಾಗಲೇ ಕೇಳಿತು ಆ ಧ್ವನಿ – 'ಆ್ಯಕ್ಷನ್'. ಮಹಾರಾಜನ ಕಟ್ಟಪ್ಪಣೆಯಂತೇ ಸಿಡಿಲ ಧ್ವನಿಯಂತೆ ಕೇಳಿದ ಆ ಧ್ವನಿಗೆ ಬೆಚ್ಚಿ ಪಕ್ಕಕ್ಕೆ ಸರಿದು ನಿಂತಿದ್ದಾಯಿತು.

ಅಲ್ಲಿಯವರೆಗೆ ರಾಜಲೋಕದ ವೈಭೋಗದಲ್ಲಿ ಇಹವನ್ನು ಮರೆತಿದ್ದ ನನಗೆ, ಇದು ದರ್ಶನ್ ನಟಿಸುತ್ತಿರುವ 'ರಾಜಾ ವೀರ ಮದಕರಿ' ಚಿತ್ರದ ಚಿತ್ರೀಕರಣದ ಸೆಟ್ ಎಂಬ ಪರಿವು ಮರುಕಳಿಸಿದ್ದೂ ಆಗಲೇ! ಅಷ್ಟಾಗಿಯೂ ನನ್ನ ಕಣ್ಣುಗಳು ಆ ಬೆರಗಿನ ಲೋಕವನ್ನು ಸವಿಯುವುದನ್ನು ಬಿಟ್ಟಿರಲಿಲ್ಲ.

ಮೆಲ್ಲಗೇ ಹಾಡು ಕೇಳಿಬರತೊಡಗಿತು ಕ್ಯಾಮೆರಾಮೆನ್ ಚುರುಕಾಗಿ ನಿಂತಲ್ಲಿಂದ ಮುಂದೆ ಜರುಗತೊಡಗಿದ. ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಅವರ ಕಣ್ಣುಗಳಂತೂ ಗುಪ್ತ ಕ್ಯಾಮೆರಾದ ಹಾಗೆ ಸೆಟ್‌ನ ಸರ್ವಭಾಗವನ್ನು ಮಿಂಚಿನ ವೇಗದಲ್ಲಿ ಅಳೆಯುತ್ತಿದ್ದವು. ಹಿನ್ನೆಲೆ ಸಂಗೀತ ಜೋರಾಯ್ತು. ಒಂದಿಷ್ಟು ನರ್ತಕಿಯರು ಖಾಲಿ ಸಿಂಹಾಸನದ ಎದುರು ಬಂದು ನರ್ತಿಸತೊಡಗಿದರು. ಅದು ಮದಕರಿ ನಾಯಕನ ಇಂಟ್ರೊಡಕ್ಷನ್ ಸಾಂಗ್ ಚಿತ್ರೀಕರಣ.

ಎಂದೂ ನಂದದ ತೂಗುದೀಪ
ಎದುರು ನಿಂತರೆ ಮರಣವೇ ಶಾಪ
ಕಣ್ಣೋಟವೆ ಸಾಕು ಹೆಂಗಳೆಯರು ಗಾಬರಿ
ಕರಿ ಕರಿ ಕರಿ ಅರಿಗಳ ಪಾಲಿಗೆ ನರಕದ ದಾರಿ
ಕರಿ ಕರಿ ಕರಿ ಬಂದಾ ನಮ್ಮ ವೀರ ಮದಕರಿ...

ಕಿವಿಗಡಚಿಕ್ಕುವ ಸಂಗೀತದೊಂದಿಗೆ ಬಹುಪರಾಕ್ ಮುಗಿಲು ತಾಕುವ ಹಾಗೆ ಮೊಳಗುತ್ತಿರುವಂತೆಯೇ ಎದುರಿಂದ ದಡದಡದಡನೇ ನಡೆದುಬಂದ ಸರ್ವಾಲಂಕಾರ ಭೂಷಿತ ಮದಕರಿ ನಾಯಕ. ನೇರವಾಗಿ ಬಂದು ಇನ್ನೇನು ಸಿಂಹಾಸನದ ಮೇಲೆ ಕೂಡಬೇಕು ಅಷ್ಟರಲ್ಲಿ ನಾಯಕನ ಮುಖದಲ್ಲಿ ಅಷ್ಟರವರೆಗೆ ಇದ್ದ ಗಾಂಭೀರ್ಯ ಮಾಯವಾಗಿ ಆ ಜಾಗದಲ್ಲಿ ಕೋಪ ತುಂಬಿಕೊಂಡಿತು. ಸಿಂಹಾಸನದಲ್ಲಿ ಕೂಡುವ ಬದಲು ಸರಕ್ಕನೇ ತಿರುಗಿ ನಿಂತ.



ಕ್ಯಾಮೆರಾಮೆನ್ ಬಾಯಿಯಿಂದ ಥಟ್ಟನೇ 'ಥತ್, ಇದೂ ಫೇಲ್' ಎಂಬ ಗೊಣಗು ನನಗಷ್ಟೇ ಕೇಳಿಸಿತೋ, ಅಥವಾ ಉಳಿದವರಿಗೆ ಕೇಳಿಸಿಯೂ ಕೇಳಿಸದ ಹಾಗೇ ಸುಮ್ಮನಿದ್ದರೋ ಗೊತ್ತಾಗಲಿಲ್ಲ. ನಿರ್ದೇಶಕರು ಕೋಪದಿಂದ ತಿರುಗಿ ನಿಂತಿದ್ದ ಮದಕರಿ ನಾಯಕನನ್ನೇ ಆತಂಕದಿಂದ ನೋಡುತ್ತ ನಿಂತಿದ್ದರು. 'ಏನ್ ಅಂಗಂದ್ರೆ? ಯಾರ್ ಬರ್ದಿದ್ದು ಈ ಸಾಂಗ್‌ನ?' ನಾಯಕರು ಅಬ್ಬರಿಸಿದರು. ಹಾ! ಧ್ವನಿ ಹೊರಬಿದ್ದಾಗಲೇ ಹೊಳೆದಿದ್ದು, ನಾಯಕನ ವೇಷದಲ್ಲಿ ಇರುವುದು ಮತ್ಯಾರೂ ಅಲ್ಲ, ನಮ್ ಚಾಲೆಂಜಿಂಗ್ ಸ್ಟಾರ್ ದರ್ಶನ್ ಎಂದು. ನೋಟ ಮಾತ್ರಕ್ಕೆ ಗುರ್ತೇ ಸಿಗದ ಹಾಗೆ ಅವರು ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡಿಬಿಟ್ಟಿದ್ದು ನೋಡಿ ಅಚ್ಚರಿಪಡುವ ಸರದಿ ನಮ್ಮದು.

ಪಟ್ಟನೇ ನಿರ್ದೇಶಕರು ದರ್ಶನ್ ಇದ್ದಲ್ಲಿಗೆ ಓಡಿದರು. ಅಷ್ಟರಲ್ಲಿ ಹಾಡು ಬರೆದ ಹುಡುಗನೂ ನಡುನಡುಗುತ್ತ ಬಂದು ನಡುಬಾಗಿಸಿ ನಿಂತಿದ್ದ.

> ಒಬ್ಬ ಪ್ರೊಡ್ಯೂಸರು ಮನೆ ಮಠ ಮಾರ್ಕೊಂಡು ಸಿನಿಮಾ ಮಾಡಿದ್ರೆ ಸಿನಿಮಾ ಡಬ್ಬಾ ಅಂಥ ಒಂದೇ ಲೈನ್ ನಲ್ಲಿ ಬರ್ದು ಮುಗಿಸ್ತೀರಾ ಆದು ರಿವ್ಯೂ ಅಂತೆ ಆ ನಿರ್ಮಾಪಕ ಎಷ್ಟ್ ಕಷ್ಟಪಟ್ಟಿದಾನೆ. ಅವ್ನಿಗೆ ಎಷ್ಟ್ ಸಾಲ ಇದೆ ಎಷ್ಟ್ ಜನರು ಆ ಸಿನಿಮಾಗೆ ಕೆಲಸ ಮಾಡ್ತಿದಾರೆ ಅಂತ ಕಲ್ಪನೆ ಇದ್ಯಾ ನಿಮಗೆ?

'ಅಲ್ಲಪ್ಪಾ, ನಾನ್ ಎಂಗ್ ಕಾಣ್ತೇನಿ ನಿಂಗೆ?' ಹುಡುಗ ನಡುಗುತ್ತಲೇ 'ಅಣಾ ನೀವು ಡೀ ಬಾಸ್... ಸೂಪರ್ ಸ್ಟಾರ್? ಯಾಕಣ್ಣಾ? ಏನಾದ್ರೂ ತಪ್ಪಾಯ್ತಾ?'.

'ನಾನ್ ಸೂಪರ್ ಸ್ಟಾರೋ, ಡೂಪರ್ ಸ್ಟಾರೋ ಡಿಸೈಡ್ ಮಾಡೋಕೆ ನೀನ್ಯಾರೋ? ನನ್ ಬಣ್ಣ ಹೇಗಿದೆ ಅಂತ ಹೇಳು'.

'ಅಣಾ ಸೂಪರ್ ಕಲರ್ ಫುಲ್ ವೈಟ್'.

'ಕಾಣ್ತದೆ ತಾನೆ? ಮತ್ಯಾಕೋ ಆ ಹಾಡಲ್ಲಿ ಕರಿ ಕರಿ ಕರಿ ಅಂತ ಕೊರೊನಾ ಬಂದವ್ರ ಹಾಗೆ ಬರ್ದಿದೀಯಾ? ನಮ್ ಹುಡುಗ್ರು ಇದನ್ನ ಕೇಳಿ ಏನಂದ್ಕಂತಾರೆ? ಕಾಮನ್‌ಸೆನ್ಸ್ ಇದ್ಯಾ ನಿಂಗೆ? ಇಂಡಸ್ಟ್ರೀಲಿ ಈಗಷ್ಟೇ ಚಿಗುರ್ಕೋತಿದೀಯಾ? ಆಗ್ಲೇ ಇಂಥಾ ತರ್ಲೆ ಮಾಡ್ತಿದೀಯಾ ಅಂದ್ರೆ ಎಷ್ಟ್ ಚರ್ಬಿ ನಿಂಗೆ? ಇನ್ ಇಪ್ಪತ್ ನಿಮಿಷ ಟೈಮ್ ಕೊಡ್ತೀನಿ ಹಾಡಲ್ಲಿ ಒಂದೂ ಕರಿ ಅನ್ನೋ ಶಬ್ದ ಬರ್ಬಾರ್ದು ಹಂಗೆ ಚೇಂಜ್ ಮಾಡ್ಕೊಂಬಾ'

'ಅಣಾ.. ಅದು ಹಂಗಲ್ಲಾ ಅಣಾ ಕರಿ ಅಂದ್ರೆ ಆನೆ ಅಂಥ ಅರ್ಥ'.

'ನನ್ ಪಿಚ್ಚರ್ ನೋಡೋರು ಕನ್ನಡ ಪಂಡಿತ್ರಾ? ಕಾಮನ್ ಪೀಪಲ್. ಪೌರಾಣಿಕ ಕಥೇನ ಕಾಮನ್ ಪೀಪಲ್‌ಗೆ ಮುಟ್ಟಿಸ್ಬೇಕು ಅಂತ ಸಿನಿಮಾ ಮಾಡ್ತಿರೋದು ನಾನು. ಈ ಪಿಚ್ಚರ್ ನೋಡೋಕೆ ಮಂಡ್ಯದ ಯಾವ್ದೋ ಊರಿಂದ ಬರೋ ಆಡಿಯನ್ಸ್‌ಗೆ ಕರಿ ಅಂದ್ರೆ ಆನೆ ಅಂತ ಗೊತ್ತಾಗತ್ತಾ? ಮೊದ್ಲು ಜನರಿಗೆ ಅರ್ಥ ಆಗೋ ಹಾಗೆ ಬರೆಯೋದು ಕಲೀರಿ ನಿಮ್ಮಂಥೋರಿಂದ್ಲೇ ಜನ, ಕನ್ನಡ ಪಿಚ್ಚರ್ ನೋಡೋದು ಬಿಟ್ಟು ತೆಲುಗು ತಮಿಳು ಸಿನಿಮಾನ ಅಂಡ್ ಎತ್ಕೊಂಡು ನೋಡೋದು ಹೋಗು.. ಮೊದ್ಲು ಸಾಂಗ್ ಚೇಂಜ್ ಮಾಡ್ಕೊಂಡ್ ಬಾ'

ಹುಡುಗ ತಲೆ ಬಗ್ಗಿಸಿಕೊಂಡು ಆಚೆ ಹೋದ ದರ್ಶನ್ ಕಿವಿಯಲ್ಲಿ ಅಸಿಸ್ಟೆಂಟ್ ಒಬ್ಬರು ಹೋಗಿ ಸಂದರ್ಶನಕ್ಕಾಗಿ ನಾನು ಕಾಯುತ್ತಿರುವ ವಿಷಯ ಉಸುರಿದರು. ಡಿ ಬಾಸ್, ಸಿಂಹಾಸನ ಏರಲು ಬಂದಷ್ಟೇ ವೇಗವಾಗಿ ಸರ್ವಾಲಂಕಾರಭೂಷಿತರಾಗಿ